ದಿನಾಂಕಃ **28.07.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ವಿ.ಆರ್.ಆರ್. ವಕೀಲರಿಂದಃ</u>

ದಿಃ02.01.1984 ರ ವಿಭಾಗದಲ್ಲಿ ದಾವಾ ಸ್ವತ್ತುಗಳನ್ನು ಸಹ ವಿಭಾಗ ಮಾಡಿಕೊಂಡಿರುತ್ತೀರೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಸರ್ವೆ.ನಂಬರ್.61/1 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಉತ್ತರಿಸುತ್ತಾರೆ. ಸರ್ವೆ.ನಂಬರ್.61/1 ನ್ನು ನನ್ನ ತಂದೆ ರಾಮಪ್ಪರವರಿಂದ ಖರೀದಿ ಮಾಡಿರುತ್ತಾರೆ. ಸರ್ವೆ.ನಂಬರ್.61/1 ನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂಬುದಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

2. 1971 ರಲ್ಲಿ ನನ್ನ ತಂದೆಯ ಹೆಸರಿಗೆ ಸರ್ವೆ.ನಂಬರ್.61/1 ನೊಂದಣಿ ಕ್ರಯಪತ್ರ ಆಗಿರುತ್ತದೆ ಎಂದರೆ ಸರಿ. 1971 ರಲ್ಲಿ ನನ್ನ ತಂದೆ ಗೋಪಾಲಪ್ಪ ನಮ್ಮ ಒಟ್ಟು ಕುಟುಂಬದ ಯಜಮಾನಿಕೆ ಮತ್ತು ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 1968 ರಲ್ಲಿಯೇ ನನ್ನ ತಂದೆಯನ್ನು ಪ್ರತ್ಯೇಕವಾಗಿ ಕಳುಹಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. 1984 ರಲ್ಲಿ ಗೋಪಾಲಪ್ಪ, ಹನುಮಂತರಾಯಪ್ಪ ಮತ್ತು ಕಿಟ್ಟಪ್ಪ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 1984 ರವರೆಗೂ ನನ್ನ ತಂದೆಯೇ ಒಟ್ಟು ಕುಟುಂಬದ ಮುಖ್ಯಸ್ಥರಾಗಿ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಆದ್ದರಿಂದ ಅವರ ಹೆಸರಿಗೆ ಕ್ರಯಪತ್ರ ಆಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

3. ದಾವಾ ಸರ್ವೆ.ನಂಬರ್.61/1 ಮತ್ತು ಸರ್ವೆ.ನಂಬರ್.61/2 ಮೂಲತಃ ನಂಜೇಗೌಡರ ಎಂ.ಎನ್.ರಾಮಪ್ಪರವರಿಗೆ ಸೇರಿತ್ತು ಎಂದರೆ ಸರಿ. ಎಂ.ಎನ್.ರಾಮಪ್ಪರವರಿಂದ ನನ್ನ ತಂದೆಗೆ ಸರ್ವೆ.ನಂಬರ್.61/1 ಕ್ಕೆ ಸಂಬಂಧಿಸಿದಂತೆ ಕ್ರಯಪತ್ರ ಆಗಿರುತ್ತದೆ.. ಸದರಿ ಕ್ರಯಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತುಗಳನ್ನು ಒಟ್ಟು ಕುಟುಂಬದ ಪರವಾಗಿ ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸರ್ವೆ.ನಂಬರ್.61/1 ರ ಒಟ್ಟು ವಿಸ್ತೀರ್ಣ 1 ಎಕರೆ 5 ಗುಂಟೆ ಇರುತ್ತದೆ. ಸರ್ವೆ.ನಂಬರ್.61/1 ರ ಒಟ್ಟು 3 ಎಕರೆ ಜಮೀನು ಒಟ್ಟು ಕುಟುಂಬ ಪರವಾಗಿ ಗೋಪಾಲಪ್ಪ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

4. ಕೆ.ಎಲ್.ರೇವಣ್ಣರವರು ಸರ್ವೆ.ನಂಬರ್.61/2 ಕ್ಕೆ ಸಂಬಂಧಿಸಿದಂತೆ ನನ್ನ ತಂದೆ ಗೋಪಾಲಪ್ಪರವರ ಹೆಸರಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ.. ಕೆ.ಎಲ್.ರೇವಣ್ಣ ಸರ್ವೆ.ನಂಬರ್.6/15 ಕ್ಕೆ ಸಂಬಂಧಿಸಿದಂತೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನಿಡಿ-1 ರ ಆಧಾರದ ಮೇರೆಗೆ ಆದಂತಹ ನಿಡಿ-2 ಮ್ಯುಟೇಷನ್ ಸರಿಯಿರುತ್ತದೆ. ನಿಡಿ-1 ಮತ್ತು ನಿಡಿ-2 ದಾವಾ ಸ್ವತ್ತಿಗೆ ಸಂಬಂಧಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

5. ದಾವಾ ಸ್ವತ್ತುಗಳ ಖಾತೆ ನನ್ನ ತಂದೆ ತೀರಿಕೊಂಡ ನಂತರ ಪೌವತಿ ವಾರಸು ಮೇರೆಗೆ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಫ್ರಾಸಾ-3 ಮತ್ತು ಫ್ರಾಸಾ-4 ರವರು ನನ್ನೊಂದಿಗೆ ವಿಶ್ವಾಸದಿಂದ ಇರುವುದಿಲ್ಲ. ದಾವಾ ಸ್ವತ್ತುಗಳು ನನ್ನ ತಂದೆಯ ಒಟ್ಟು ಕುಟುಂಬದ ಆಸ್ತಿಗಳು ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಎಲ್ಲಾ ವಾರಸುದಾರರು ಜಂಟಿ ಸ್ವಾಧೀನದಲ್ಲಿ ಇರುತ್ತೇವೆ

ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳಲ್ಲಿನ ಹನುಮಂತರಾಯಪ್ಪ ಮತ್ತು ಕಿಟ್ಟಪ್ಪರವರ ವಾರಸುದಾರರ ಹಿಸ್ಸೆಯ ಜಮೀನನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ದಾವಾ ಸ್ವತ್ತುಗಳು ನನ್ನ ತಂದೆಯ ಸ್ವಾಯಾರ್ಜಿತ ಆಸ್ತಿಗಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

6. ನನ್ನ ಚಿಕ್ಕಪ್ಪ ಕಿಟ್ಟಪ್ಪರವರು 1986 ರಲ್ಲಿಯೇ ಮನೆ ಬಿಟ್ಟು ಹೋಗಿರುತ್ತಾರೆ. ಸಾಕ್ಷಿ ಮುಂದುವರೆದು ಅವರೆ ಮನೆಯ ಯಜಮಾನರು ಆಗಿದ್ದರು ಎಂದು ಉತ್ತರಿಸುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ